ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-02-1994.

# *ಸ್ವಮಾನದ ಸ್ಮೃತಿಯ ಸ್ವಿಚ್‌ಅನ್ನು ಆನ್ ಮಾಡುವುದರಿಂದ ದೇಹಭಾನದ ಅಂಧಕಾರವು ಸಮಾಪ್ತಿಯಾಗುತ್ತದೆ*

(स्वमान की स्मृति का स्विच ऑन करने से - देह भान के अंधकार की समाप्ति)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಕಿರೀಟ, ಸಿಂಹಾಸನ ಮತ್ತು ತಿಲಕದ ಸ್ಮೃತಿಯನ್ನು ತರಿಸಿ ಫರಿಶ್ತಾ ಸ್ವರೂಪದ ಸ್ಥಿತಿಯಲ್ಲಿ ಸ್ಥಿತರನ್ನಾಗಿ ಮಾಡುವ ಅಕಾಲಮೂರ್ತಿ ಬಾಪ್‌ದಾದಾ ತನ್ನ ಅಕಾಲ ಸಿಂಹಾಸನಾಧಿಕಾರಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.

ಇಂದು ಅಕಾಲ ಮೂರ್ತಿ ತಂದೆಯವರು ಸರ್ವ ಅಕಾಲ ಸಿಂಹಾಸನಾಧಿಕಾರಿ. ವಿಶ್ವ ಕಲ್ಯಾಣದ ಕಿರೀಟಧಾರಿ, ಮಸ್ತಕದಲ್ಲಿ ಹೊಳೆಯುತ್ತಿರುವ ಬಿಂದುವಿನ ತಿಲಕವುಳ್ಳಂತಹ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬರೂ ಸಿಂಹಾಸನಾಧಿಕಾರಿಯೂ ಆಗಿದ್ದಾರೆ. ಕಿರೀಟಧಾರಿಯೂ ಹಾಗೂ ಎಲ್ಲರ ತಿಲಕವೂ ಹೊಳೆಯುತ್ತಿದೆ. ಎಲ್ಲರ ಮಸ್ತಕದಲ್ಲಿ ಆತ್ಮ. ಬಿಂದುವು ನಕ್ಷತ್ರದಂತೆ ಕಾಣಿಸುತ್ತಿದೆ. ತಾವೆಲ್ಲರೂ ಸಹ ತಮ್ಮ ಸಿಂಹಾಸನ. ಕಿರೀಟ ಹಾಗೂ ತಿಲಕವನ್ನು

ನೋಡಿಕೊಳ್ಳುತ್ತಿದ್ದೀರಾ! ಬಾಪ್‌ದಾದಾರವರಿಗೆ ಇಡೀ ಸಭೆಯೇ ಕಿರೀಟ, ತಿಲಕವುಳ್ಳ, ಸಿಂಹಾಸನಾಧಿಕಾರಿಯಾಗಿ ಕಾಣಿಸುತ್ತಿದೆ. ಈ ಅಲೌಕಿಕ ಸಭೆಯು ಕಲಿಯುಗೀ ರಾಜ್ಯ ಸಭೆ ಹಾಗೂ ಸತ್ಯಯುಗೀ ರಾಜ್ಯ ಸಭೆಗಿಂತಲೂ ಬಹಳಷ್ಟು ಭಿನ್ನ ಹಾಗೂ ಪ್ರಿಯವಾಗಿರುವ ಸಭೆಯಾಗಿದೆ! ಹಾಗಾದರೆ ಇಂತಹ ಸಭೆಯ ಅಧಿಕಾರಿಗಳು ಎಷ್ಟೊಂದು ಪ್ರಿಯರಾಗಿರುತ್ತಾರೆ! ತಾವೆಲ್ಲರಿಗೂ ಸಹ ತಮ್ಮ ಈ ಸಿಂಹಾಸನ, ಕಿರೀಟ ಹಾಗೂ ತಿಲಕವುಳ್ಳ ಸ್ವರೂಪವು ಪ್ರಿಯವೆನಿಸುತ್ತದೆ ಅಲ್ಲವೆ! ಯಾವಾಗ ಅಕಾಲ ಸಿಂಹಾಸನಾಧಿಕಾರಿ, ಅಕಾಲಮೂರ್ತಿ, ಶ್ರೇಷ್ಠ ಆತ್ಮರ ಸ್ಥಿತಿಯಲ್ಲಿ ಸ್ಥಿತರಾಗಿದ್ದು ಸಿಂಹಾಸನದ ಮೇಲೆ ಕುಳಿತುಕೊಂಡರೆ ಇದೆಷ್ಟು ಶ್ರೇಷ್ಠವಾದ ಸ್ಥಿತಿಯಾಗಿದೆ! ಎಲ್ಲರ ಶ್ರೇಷ್ಠ ಸ್ಥಿತಿಯ ಹೊಳಪು ಈ ಚಹರೆಯನ್ನು ಫರಿಶ್ತೆಯನ್ನಾಗಿ ಮಾಡಿಬಿಡುತ್ತದೆ. ಸಾಧಾರಣ ಚಹರೆಯಲ್ಲ, ಪರಿಶ್ತೆಯ ಚಹರೆ. ಹಾಗಾದರೆ ಫರಿಶ್ತೆಯ ಚಹರೆಯೂ ಸಹ ಎಷ್ಟೊಂದು ಪ್ರಿಯವಾದುದು! ಫರಿಶ್ತೆ ಸರ್ವರಿಗೂ ಪ್ರಿಯವೆನಿಸುತ್ತಾರೆ ಏಕೆಂದರೆ ಸರ್ವರಿಗಾಗಿ ಇರುತ್ತಾರೆ. ಒಬ್ಬರು-ಇಬ್ಬರಿಗಾಗಿ ಇರುವುದಿಲ್ಲ. ಬೇಹದ್ದಿನ ದೃಷ್ಟಿ. ಬೇಹದ್ದಿನ ವೃತ್ತಿ, ಬೇಹದ್ದಿನ ಸ್ಥಿತಿಯುಳ್ಳವರಾಗಿದ್ದಾರೆ. ಫರಿಶ್ತೆಯು ಸರ್ವಾತ್ಮರಿಗಾಗಿ ಪರಮಾತ್ಮನ ಸಂದೇಶವಾಹಕರು ಆಗಿದ್ದಾರೆ. ಸದಾ ಹಾರುವ ಕಲೆಯವರು ಫರಿಶ್ತೆಯಾಗಿದ್ದಾರೆ. ಫರಿಶ್ತೆ ಅರ್ಥಾತ್ ಸರ್ವ ಸಂಬಂಧಗಳನ್ನು ಒಬ್ಬ ತಂದೆಯೊಂದಿಗೆ ಜೋಡಣೆ ಮಾಡಿಸುವವರು, ಫರಿಶ್ತೆ ಅರ್ಥಾತ್ ಡಬಲ್ ಲೈಟ್. ದೇಹ ಹಾಗೂ ದೇಹದ ಸಂಬಂಧದಿಂದ ಭಿನ್ನ(ಅತೀತ), ಹಗುರವಾಗಿರುವವರು ಆಗಿದ್ದಾರೆ. ಫರಿಶ್ತೆ ಎಂದರೆ ಸರ್ವರನ್ನು ಸ್ವಯಂನ ಚಲನೆ ಹಾಗೂ ಚಹರೆಯ ಮೂಲಕ ತಂದೆಯ ಸಮಾನ ಮಾಡುವವರು. ಫರಿಶ್ತೆ ಅರ್ಥಾತ್ ಸದಾ ಸಹಜ ಹಾಗೂ ಸ್ವತಹವಾಗಿ ಅನಾದಿ ಹಾಗೂ ಆದಿ ಸಂಸ್ಕಾರವನ್ನು ಸ್ಮೃತಿ ಸ್ವರೂಪದಲ್ಲಿ ತೋರಿಸುವವರು. ಫರಿ! ಅರ್ಥಾತ್ ನಿಮಿತ್ತ ಭಾವ, ನಿರಹಂಕಾರಿ ಸ್ವಭಾವ ಹಾಗೂ ಸರ್ವರ ಬಗ್ಗೆ ಕಲ್ಯಾಣದ ಶ್ರೇಷ್ಠ ಭಾವನೆಯಿರುವವರು. ಇಂತಹ ಫರಿಶ್ತೆ ಆಗಿದ್ದೀರಲ್ಲವೆ? ನಾವಾಗದಿದ್ದರೆ ಮತ್ತಾರು ಆಗುವರು!- ಇದನ್ನು ನಶೆಯಿಂದ ಹೇಳಿರಿ. ನಶೆಯಿದೆಯಲ್ಲವೆ! ಹಾಗಾದರೆ ಬಾಪ್‌ದಾದಾರವರು ಇಂತಹ ಫರಿಶ್ತೆಗಳ ದರ್ಬಾರನ್ನು ನೋಡುತ್ತಿದ್ದಾರೆ. ಕೇವಲ ಇದೇ ಸ್ವಮಾನದಲ್ಲಿ ಸ್ಥಿತರಾಗುವುದರಿಂದ ಸ್ವತಹವಾಗಿಯೇ ದೇಹದ ಪರಿವೆಯು ಸಮಾಪ್ತಿಯಾಗಿಬಿಡುವುದು.

ತಂದೆಯು ನೋಡುತ್ತಾರೆ- ಮಕ್ಕಳು ದೇಹದ ಪರಿವೆಯನ್ನು ಬಿಡುವುದಕ್ಕೆ ಬಹಳ ಕಷ್ಟಪಡುತ್ತಾರೆ. ದೇಹಭಾನದ ಒಂದು ರೂಪವನ್ನು ಬಿಟ್ಟರೆ ಇನ್ನೊಂದು ಬಂದುಬಿಡುತ್ತದೆ. ಇನ್ನೊಂದು ಬಿಟ್ಟರೆ ಮತ್ತೊಂದು ಬಂದುಬಿಡುತ್ತದೆ. ಆದರೆ ಬಿಡುವುದಂತು ಸದಾ ಕಷ್ಟವಾಗಿಬಿಡುತ್ತದೆ ಹಾಗೂ ಧಾರಣೆ ಮಾಡುವುದು ಸಹಜವಾಗುತ್ತದೆ. ಅದಕ್ಕಾಗಿ ಬಾಪ್‌ದಾದಾರವರು ಹೇಳುತ್ತಾರೆ- ಸದಾ ಸ್ವಮಾನದಲ್ಲಿರಿ. ಎಲ್ಲಿ ಸ್ವಮಾನವಿರುವುದೋ ಅಲ್ಲಿ ದೇಹಭಾನವು ಬರಲು ಸಾಧ್ಯವೇ ಇಲ್ಲ. ಹಾಗಾದರೆ ಬಿಡುವುದಕ್ಕೆ ಕಷ್ಟಪಡಬಾರದು ಆದರೆ ಸ್ವಮಾನದಲ್ಲಿ ಸ್ಥಿತರಾಗುವ ಗಮನವನ್ನಿಡಿ ಹಾಗೂ ಸಂಗಮಯುಗದಲ್ಲಿ ಸ್ವಯಂ ತಂದೆಯ ಮೂಲಕ ಎಷ್ಟೊಂದು ಒಳೊಳ್ಳೆಯ ಸ್ವಮಾನಗಳು ಪ್ರಾಪ್ತಿಯಾಗಿವೆ. ಅದರ ದೊಡ್ಡ ಪಟ್ಟಿಯೇ ಇದೆ! ಅದನ್ನು ಪ್ರಾಪ್ತಿ ಮಾಡಿಕೊಳ್ಳಬೇಕಾಗಿಲ್ಲ. ಪ್ರಾಪ್ತಿಯಾಗಿದೆ. ಆ ಸ್ವಮಾನಗಳ ಪಟ್ಟಿಯನ್ನು ತೆಗೆಯಿರಿ. ಇಡೀ ಕಲ್ಪದಲ್ಲಿ ಎಷ್ಟೇ ಸ್ವಮಾನಗಳು ಅಂದರೆ ಪ್ರಸಿದ್ಧವಾಗಿರುವ ಆತ್ಮರ ಎಷ್ಟೇ ಬಿರುದುಗಳಿರಬಹುದು. ಭಲೆ ರಾಜನೇತರರದಿರಲಿ, ಪಾತ್ರಧಾರಿಗಳದೇ ಇರಲಿ, ಧರ್ಮಾತ್ಮರದೇ ಆಗಿರಲಿ, ಮಹಾನ್ ಆತ್ಮರದಾಗಿರಲಿ, ಅವರೆಲ್ಲರ ಬಿರುದುಗಳನ್ನು ಲೆಕ್ಕ

ಮಾಡಿದರೂ ಸಹ ತಮ್ಮ ಸ್ವಮಾನದ ಪಟ್ಟಿಗಿಂತಲೂ ಹೆಚ್ಚಾಗಿರಲು ಸಾಧ್ಯವೇ? ಹಾಗೂ ಪ್ರತಿನಿತ್ಯವೂ ಬೆಳಬೆಳಗ್ಗೆ ಬಾಪ್‌ದಾದಾರವರು ಸ್ವಮಾನದ ಸ್ಮೃತಿ ತರಿಸುತ್ತಾರೆ. ಸ್ವಮಾನದಲ್ಲಿ ಸ್ಥಿತರನ್ನಾಗಿ ಮಾಡಿಸುತ್ತಾರೆ. ಪ್ರತಿನಿತ್ಯವೂ ಒಂದು ಹೊಸ ಸ್ವಮಾನವನ್ನು ಸ್ಮೃತಿ ಮಾಡಿದರೆ ದೇಹಭಾನವು ಬೆಳಕಿನ ಮುಂದೆ ಅಂಧಕಾರವು ಓಡಿದಂತೆ ಓಡಿಬಿಡುತ್ತದೆ. ಸಮಯವೂ ಹಿಡಿಸುವುದಿಲ್ಲ, ಪರಿಶ್ರಮವನ್ನೂ ಪಡಬೇಕಾಗಿರುವುದಿಲ್ಲ ಹಾಗಾದರೆ ಮತ್ತೆ-ಮತ್ತೆ ಭಿನ್ನ-ಭಿನ್ನ ದೇಹಾಭಿಮಾನವನ್ನು ಸಮಾಪ್ತಿ ಮಾಡಲು ಏಕೆ ಶ್ರಮಿಸುತ್ತಿದ್ದೀರಿ? ಸ್ವಮಾನದ ಸ್ಮೃತಿಯ ಸ್ವಿಚ್‌ಅನ್ನು ಆನ್ ಮಾಡಲು ಬರುವುದಿಲ್ಲವೇ? ಎಷ್ಟೇ ದಟ್ಟನೆಯ ಕಪ್ಪು ಮೋಡಗಳೇ ಇರಲಿ. ಸೂರ್ಯನ ಬೆಳಕನ್ನು ಬಚ್ಚಿಡುವಂತಹ ಮೋಡಗಳೇ ಆಗಿರಲಿ ಆದರೆ ತಮ್ಮಬಳಿ ಸ್ವತಹವಾಗಿ ಡೈರೆಕ್ಟ್ ಪರಮಾತ್ಮನ ಪ್ರಕಾಶತೆಯ ಸಂಬಂಧವಿದೆ, ಡೈರೆಕ್ಟ್ ಲೈನ್(ಸಂಪರ್ಕ) ಇದೆಯಲ್ಲವೇ? ಸಂಪರ್ಕವು ಸರಿಯಾಗಿದೆಯೇ ಅಥವಾ ಲೀಕೇಜ್ ಇದೆಯೇ? ಡೈರೆಕ್ಟ್ ಲೈನ್ ಎಷ್ಟೊಂದು ಶಕ್ತಿಶಾಲಿ ಆಗಿರುತ್ತದೆ! ಡೈರೆಕ್ಟ್ ಸಂಪರ್ಕವಿದೆಯೇ ಅಥವಾ ಇನ್‌ಡೈರೆಕ್ಟ್(ಮಧ್ಯವರ್ತಿ) ಇದೆಯೇ ಎಲ್ಲರ ಡೈರೆಕ್ಟ್ ಲೈನ್ ಇದೆಯಲ್ಲವೆ? ಎಲ್ಲರಿಗೂ ಡೈರೆಕ್ಟ್ ಲೈನ್ ಸಿಕ್ಕಿದೆಯೇ? ಆನಂತರ ಒಂದು ಮೋಡವೇನು! ಬಹಳಷ್ಟು ಮೋಡಗಳು ಬಂದರೂ ಸಹ ಅಂಧಕಾರ ತರಲು ಸಾಧ್ಯವೇ? ಸ್ಮೃತಿಯ ಸ್ವಿಚ್ ಡೈರೆಕ್ಟ್ ಲೈನ್‌ನಿಂದ ಆನ್ ಮಾಡಿದಿರಿ ಮತ್ತು ಹೇಗೆ ಬೆಳಕು ಬರುತ್ತದೆಯೆಂದರೆ ಅದರಿಂದ ಸ್ವಯಂ ಕೂಡಾ ಪ್ರಕಾಶತೆಯಲ್ಲಿಯೇ ಇರುತ್ತೀರಿ ಮತ್ತು ಅನ್ಯರಿಗಾಗಿಯೂ ಲೈಟ್ ಹೌಸ್ ಆಗಿಬಿಡುತ್ತೀರಿ. ಹೀಗೆ ಆಗುತ್ತದೆಯಲ್ಲವೇ? ಅನುಭವಿ ಆಗಿದ್ದೀರಲ್ಲವೇ? ಆದರೆ ಕೆಲವೊಮ್ಮೆ ಅನುಭವವನ್ನು ಬದಿಗಿಟ್ಟು ಬಿಡುತ್ತೀರಿ. ಆಶ್ರಯ ಸಿಕ್ಕರೂ ಸಹ ಕೆಲವೊಮ್ಮೆ ಆಶ್ರಯಕ್ಕೆ ಬದಲು ಬದಿಗೆ ಸರಿಯುತ್ತೀರಿ. ಪರಿಶ್ರಮವೆನಿಸುತ್ತದೆಯೇ? ಸದಾ ಅನಿಸುವುದಿಲ್ಲ. ಕೆಲವೊಮ್ಮೆ ಅನುಭವವಾಗುತ್ತದೆ! ಸ್ವಿಚ್ ಆನ್ ಮಾಡುವುದನ್ನು ಮರೆತುಬಿಡುವಿರಾ? ವಾಸ್ತವದಲ್ಲಿ ಒಂದುವೇಳೆ ಒಂದು ಮಾಸ್ಟರ್ ಸರ್ವಶಕ್ತಿವಂತನ ಸ್ವಮಾನ ನೆನಪಿದ್ದರೂ ಪರಿಶ್ರಮದ ಯಾವುದೇ ಮಾತಿರುವುದಿಲ್ಲ. ಮಾರ್ಗವೇನೂ ಪರಿಶ್ರಮ ಪಡುವಂತಹದ್ದಲ್ಲ ಆದರೆ ಹೈ-ವೇಗೆ ಬದಲಾಗಿ ಗಲ್ಲಿಗಳಲ್ಲಿ ಹೊರಟುಹೋಗುತ್ತಿದ್ದೀರಿ ಅಥವಾ ಗುರಿಯ(ಲಕ್ಷ್ಯ)ದಿಂದ ಇನ್ನೂ ಮುಂದೆ ಸಾಗುತ್ತಿದ್ದೀರಿ ಆದ್ದರಿಂದ ಹಿಂತಿರುಗಿ ಬರುವ ಪರಿಶ್ರಮ ಪಡಬೇಕಾಗುತ್ತದೆ. ಬಾಪ್‌ದಾದಾರವರು ಸದಾ ತಮ್ಮ ಸ್ನೇಹ ಹಾಗೂ ಸಹಯೋಗದ ಮಡಿಲಿನಲ್ಲಿ ಕೂರಿಸಿಕೊಂಡು ಲಕ್ಷ್ಯದೆಡೆ ಕರೆದುಕೊಂಡು ಹೋಗುತ್ತಿದ್ದಾರೆ. ಮಡಿಲಿನಲ್ಲಿ ಕುಳಿತುಕೊಂಡು ಗುರಿಯನ್ನು ತಲುಪುವುದರಲ್ಲೇಕೆ ಪರಿಶ್ರಮವಾಗುವುದು? ಸ್ನೇಹ ಹಾಗೂ ಸಹಯೋಗದ ಮಡಿಲಿನಿಂದ ಹೊರಬಂದು ಕೆಲವೊಮ್ಮೆ ಅನ್ಯ ಆಕರ್ಷಣೆಗಳು ಸೆಳೆಯುತ್ತದೆಯೆಂದರೆ ಪರಿಕ್ರಮಣ ಮಾಡಲು ಹೋಗುತ್ತೀರಿ. ಅವಶ್ಯವಾಗಿ ಸುಸ್ತಾಗುತ್ತೀರಿ. ನಂತರ ಪರಿಶ್ರಮದ ಅನುಭವವನ್ನೂ ಮಾಡುತ್ತೀರಿ. ಹಾಗಾದರೆ ಈ ವರ್ಷದಲ್ಲಿ ಏನು ಮಾಡುವಿರಿ? ಪರಿಶ್ರಮ ಸಮಾಪ್ತಿ. ಪ್ರೀತಿಯಲ್ಲಿ, ಲವ್‌ನಲ್ಲಿ ಲೀನವಾಗಿಬಿಡಿ, ಲವಲೀನರಾಗಿದ್ದು ಪ್ರತಿಯೊಂದು ಕಾರ್ಯವನ್ನು ಮಾಡಿರಿ. ಯಾರು ಲೀನವಾಗುತ್ತಾರೆಯೋ ಅವರಿಗೆ ಮತ್ತೇನೂ ಕಾಣಿಸುವುದಿಲ್ಲ. ಆಕರ್ಷಿತರೂ ಆಗುವುದಿಲ್ಲ. ಹಾಗಾದರೆ ಲವ್‌ನಲ್ಲಿರುತ್ತೀರಾ! ಯಾರಾದರೂ ಇಂತಹವರಿದ್ದೀರಾ- ನನಗೆ ತಂದೆಯೊಂದಿಗೆ ಪ್ರೀತಿಯಿಲ್ಲ. ಲವ್ ಇಲ್ಲ! ಎಲ್ಲರಲ್ಲಿ ಪ್ರೀತಿಯಿದೆಯಲ್ಲವೆ! ಆದರೆ ಕೆಲವೊಮ್ಮೆ ಪ್ರೀತಿಯಲ್ಲಿ ಇರುತ್ತೀರಿ. ಕೆಲವೊಮ್ಮೆ ಲವಲೀನರಾಗುತ್ತೀರಿ ಇಲ್ಲದಿದ್ದರೆ ನೋಡಿ- ಮನಸ್ಸು-ಬುದ್ಧಿಯ ಮೂಲಕ ಸ್ಥಿತಿಯಲ್ಲಿ ತಂದೆಯ ಸರ್ವ ಸಂಬಂಧಗಳಿಂದ ಜೊತೆಯಿದ್ದಾರೆ. ಜೊತೆಯೂ ಇದ್ದಾರೆ ಹಾಗೂ ಸೇವೆಯಲ್ಲಿ ತಂದೆಯು ಪ್ರತೀ ಸಮಯದಲ್ಲಿ ಸಂಗಾತಿಯಾಗಿದ್ದಾರೆ.

ಅಂದಮೇಲೆ ಸ್ಥಿತಿಯಲ್ಲಿ ಸಂಗವಿದೆ ಹಾಗೂ ಸೇವೆಯಲ್ಲಿ ಸಂಗಾತಿಯಾಗಿದ್ದಾರೆ. ಸದಾ ಸಂಗಾತಿಯೂ ಇದ್ದಾರೆ ಹಾಗೂ ಸಂಗವೂ ಇದೆ ಅಂದಮೇಲೆ ಅಲ್ಲಿ ಕಷ್ಟವೇನಿದೆ? ಪರಮಾತ್ಮನ ಮಹಿಮೆಯೇ ಇದೆ- ಕಷ್ಟವನ್ನು ಸಹಜಗೊಳಿಸುವವರು. ಇಂತಹ ತಂದೆಯು ತಮ್ಮ ಜೊತೆಯಿದ್ದಾರೆ ಹಾಗೂ ಸಂಗಾತಿಯಾಗಿದ್ದಾರೆ ಅಂದಮೇಲೆ ಕಷ್ಟವಾಗಲು ಸಾಧ್ಯವೇ? ಮತ್ತೇಕೆ ಕಷ್ಟಪಡುತ್ತೀರಿ?

ಸರ್ವ ಸಂಬಂಧಗಳ ಸರ್ವ ಸಮಯದನುಸಾರ ತಂದೆಯು ತಾನೇ ಪ್ರತಿಯೊಂದು ಮಕ್ಕಳಿಗೂ ಆಫರ್ ಕೊಡುತ್ತಾರೆ. ಸಮಯದನುಸಾರ ಸಂಬಂಧದಿಂದ ಜೊತೆಯಲ್ಲಿರಿ ಅಥವಾ ಸಂಗಾತಿಯನ್ನಾಗಿ ಮಾಡಿಕೊಳ್ಳಿರಿ. ಕೆಲವೊಮ್ಮೆ ಸಂಬಂಧದಿಂದ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತೀರಿ. ಮತ್ತೆ ಕೆಲವೊಮ್ಮೆ ಸಂಗಾತಿಯನ್ನೂ ದೂರ ಮಾಡಿಬಿಡುತ್ತೀರಿ. ನಂತರ ಹೇಳುವುದೇನು? ಒಂಟಿಯೆಂಬ ಅನುಭವವಾಗುತ್ತಿದೆ! ನಡೆಯುತ್ತಾ-ನಡೆಯುತ್ತಾ ಒಂಟಿಯೆನಿಸುತ್ತದೆ ಮತ್ತು ಒಂಟಿಯಾಗುವುದರಿಂದ ಏನಾಗುವುದು? ತಮ್ಮ ಶ್ರೇಷ್ಠ ಜೀವನವು ಸಾಧಾರಣ ಜೀವನವೆಂಬ ಅನುಭವವಾಗುತ್ತದೆ. ನಂತರ ಬೋರಿಂಗ್ ಲೈಫ್ ಆಗಿಬಿಟ್ಟಿದೆ, ಏನಾದರೂ ಚೇಂಜ್ ಬೇಕು ಎಂದು ಹೇಳುತ್ತೀರಿ. ಒಂದುಕಡೆ ಬಾಪ್‌ದಾದಾರವರನ್ನು ಖುಷಿಪಡಿಸುತ್ತೀರಿ- ನಾವಂತೂ ಕಂಬೈಂಡ್ ಆಗಿದ್ದೇವೆ. ಕಂಬೈಂಡ್ ಆಗಿರುವವರು ಎಂದಾದರೂ ಒಂಟಿ ಆಗುವರೇನು? ಬಹಳ ಒಳ್ಳೆಯ ಮಾತನ್ನಾಡುತ್ತಾರೆ- ಬಾಬಾ. ನಾವಂತೂ ಕಂಬೈಂಡ್ ಆಗಿಯೇ ಇದ್ದೇವೆ. ನಂತರ 15-20 ವರ್ಷಗಳು ಕಳೆಯಿತೆಂದರೆ ಹೇಳುತ್ತಾರೆ- ಏನಾದರೂ ಚೇಂಜ್ ಬೇಕು, ಒಂಟಿ ಆಗಿಬಿಟ್ಟಿದ್ದೇವೆ. ಹಾಗೆ ನೋಡಿದಾಗ ಪ್ರಪಂಚದವರಿಗೆ ಏನಾದರೂ ಚೇಂಜ್ ಬೇಕೆನಿಸಿದರೆ ಅವರು ಸಾಗರದ ದಡದಲ್ಲಿ ಹೋಗಿ ಮಲಗಿಬಿಡುತ್ತಾರೆ. ಕೆಲವರು ಮನೋರಂಜನೆಯಲ್ಲಿ ಹೋಗಿಬಿಡುತ್ತಾರೆ, ನೃತ್ಯ ಮಾಡುತ್ತಾರೆ. ಇನ್ನೂ ಕೆಲವರು ಹಾಡಿನ ಮೋಜನ್ನಾಚರಿಸುತ್ತಾರೆ. ಕೆಲವರು ಜೊತೆ ಅಥವಾ ಜೊತೆಗಾರರ ಜೊತೆ ನಡೆಯುತ್ತಾರೆ. ಇದನ್ನೇ ಮಾಡುತ್ತಾರಲ್ಲವೇ! ಆಟವಾಡುತ್ತೀರಾ? ಆಟಗಳ ಪ್ರಪಂಚದಲ್ಲಿ ಉದ್ಯಾನವನದಲಿ ಹೊರಟುಹೋಗುತ್ತೀರಾ! ಇಲ್ಲಿ ಜ್ಞಾನಸಾಗರನ ದಡವಿದೆ ಎನ್ನುವುದನ್ನೇ ಮರೆತುಬಿಡುತ್ತಿದ್ದೀರಿ. ಒಂದುವೇಳೆ ನಿಮಗೆ ಸಾಗರವು ಇಷ್ಟವಾದರೆ ಸಾಗರದ ದಡದಲ್ಲಿ ಕುಳಿತುಬಿಡಿ ತಂದೆಯು ಜ್ಞಾನಸಾಗರನಲ್ಲವೆ! ತಂದೆಯು ಸಂಗಾತಿಯಲ್ಲವೇ? ಅವರೊಂದಿಗೆ ಮಜಾ ಬರುವುದಿಲ್ಲವೇ? ಅಥವಾ ಬಿಂದುವಿನೊಂದಿಗೆ ಏನು ಮಜಾ ಬರುತ್ತದೆ! ಎಂದು  ತಿಳಿಯುವಿರಾ. ತಮ್ಮೆಲ್ಲರನ್ನೂ ಖುಷಿ ಪಡಿಸುವುದಕ್ಕಾಗಿ ಬ್ರಹ್ಮಾ ತಂದೆಯವರೂ ಅವ್ಯಕ್ತವಾದರು ಆದರೆ ಇಲ್ಲಂತೂ ಸದಾಕಾಲದ ಸಂಗಾತಿ ಬೇಕಲ್ಲವೆ! ಯಾವಾಗ ತಮ್ಮನ್ನು ಒಂಟಿಯೆಂದು ಅನುಭವ ಮಾಡುತ್ತೀರೋ ಆಗ ಆ ಸಮಯದಲ್ಲಿ ಬಿಂದು ರೂಪವನ್ನು ನೆನಪು ಮಾಡಬಾರದು. ಅದು ಕಷ್ಟವೆನಿಸುತ್ತದೆ, ಅದರಿಂದ ಬೋರ್ ಆಗಿಬಿಡುತ್ತೀರಿ, ಆದರೆ ತಮ್ಮ ಬ್ರಾಹ್ಮಣ ಜೀವನದ ಭಿನ್ನ-ಭಿನ್ನ ಸಮಯದ ರಮಣೀಕ ಅನುಭವಗಳ ಕಥೆಗಳನ್ನು ಸ್ಮೃತಿಯಲ್ಲಿ ತಂದುಕೊಳ್ಳಿರಿ. ಅನುಭವದ ಕಥೆಗಳ ಪುಸ್ತಕಗಳಂತೂ ಎಲ್ಲರ ಬಳಿಯೂ ಇದೆ. ಯಾವಾಗ ಬೇಸರವಾಗಿಬಿಡುತ್ತೀರೋ ಆಗ ಪುಸ್ತಕಗಳನ್ನು ಓದುತ್ತೀರಲ್ಲವೆ. ಅಂದಾಗ ತಾವು ತಮ್ಮ ಕಥೆಗಳ ಪುಸ್ತಕವನ್ನು ತೆರೆಯಿರಿ ಹಾಗೂ ಅದನ್ನು ಓದುವುದರಲ್ಲಿ ವ್ಯಸ್ತರಾಗಿಬಿಡಿ. ತಮ್ಮ ಸ್ವಮಾನದ ಪಟ್ಟಿಯನ್ನೂ ಮಾಡಿ. ತಮಗೆ ಪ್ರಾಪ್ತಿಯಾಗಿರುವ ಪಟ್ಟಿಯನ್ನು ಸನ್ಮುಖದಲ್ಲಿ ತಂದುಕೊಳ್ಳಿರಿ. ಬ್ರಾಹ್ಮಣ ಜಗತ್ತಿನ ವಿಚಿತ್ರ ಪ್ರತ್ಯಕ್ಷ ಕಥೆಗಳನ್ನು ಸ್ಮೃತಿಯಲ್ಲಿ ತಂದುಕೊಳ್ಳಿರಿ.

ಹೇಗೆ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳುವುದಕ್ಕಾಗಿ ಸಮಾಚಾರ ಪತ್ರಗಳನ್ನು ಓದುವ ಆಧಾರ ತೆಗೆದುಕೊಳ್ಳುತ್ತೀರೋ ಹಾಗೆಯೇ ಬ್ರಾಹ್ಮಣ ಜಗತ್ತಿನಲ್ಲಿ ಎಷ್ಟೊಂದು ಅಲೌಕಿಕ ಸಮಾಚಾರಗಳನ್ನು ಆದಿಯಿಂದ ಈಗಿನವರೆಗೂ ನೋಡಿದ್ದೀರಿ ಅಥವಾ ಕೇಳಿದ್ದೀರಿ. ಸಮಾಚಾರ ಪತ್ರವೂ ತಮ್ಮ ಬಳಿಯಿದೆ. ಕೆಲವರಿಗೆ ವಾರ್ತಾಪತ್ರಿಕೆ ಓದದೇ ಸಮಾಧಾನವಿರುವುದಿಲ್ಲ. ಅದೂ ಸಹ ತಮ್ಮಬಳಿ ಇದೆ ಓದಿರಿ. ನೃತ್ಯ ಹಾಗೂ ಸಂಗೀತವನ್ನೂ ತಿಳಿದಿದ್ದೀರಿ. ಸುಸ್ತಾಗದೇ ನೃತ್ಯವನ್ನೂ ಮಾಡುತ್ತೀರಿ. ಮನ್ಮನಾಭವ ಆಗುವುದೇ ಅತಿಶ್ರೇಷ್ಠವಾದ ಮನೋರಂಜನೆ ಆಗಿದೆ ಏಕೆಂದರೆ ಸರ್ವ ಸಂಬಂಧಗಳ ಪ್ರಾಪ್ತಿ ಅಥವಾ ಅನುಭೂತಿಗಳನ್ನು ಮಾಡುವುದೇ ಮನ್ಮನಾಭವ ಆಗಿದೆ. ಕೇವಲ ತಂದೆಯ ರೂಪದಲ್ಲಿ ಅಥವಾ ವಿಶೇಷ ಮೂರು ರೂಪಗಳ ಸಂಬಂಧದಿಂದ ಅನುಭವ ಮಾಡುವುದಲ್ಲ ಆದರೆ ಸರ್ವ ಸಂಬಂಧಗಳ ಸ್ನೇಹದ ಅನುಭವ ಮಾಡಬಹುದು. ಸಂಬಂಧಗಳೊಂದಿಗೆ ಸ್ಮೃತಿ ಮಾಡುತ್ತೀರಿ ಆದರೆ ಅಂತರವೇನಾಗುತ್ತದೆ? 1.ಬುದ್ಧಿಯಿಂದ, ಜ್ಞಾನದ ಆಧಾರದಿಂದ ಸಂಬಂಧವನ್ನು ನೆನಪು ಮಾಡುವುದು. 2.ಮತ್ತೊಂದು- ಹೃದಯದಿಂದ ಆ ಸಂಬಂಧದ ಸ್ನೇಹದಲ್ಲಿ. ಪ್ರೀತಿಯಲ್ಲಿ ಲೀನರಾಗಿಬಿಡುವುದು ಅರ್ಧದಷ್ಟಂತು ಮಾಡುತ್ತೀರಿ, ಇನ್ನೂ ಅರ್ಧ ಉಳಿದುಕೊಳ್ಳುತ್ತದೆ ಆದ್ದರಿಂದ ಸ್ವಲ್ಪ ಸಮಯವಂತು ಸರಿಯಾಗಿರುತ್ತೀರಿ. ಸ್ವಲ್ಪ ಸಮಯದ ನಂತರ ಕೇವಲ ಬುದ್ಧಿಯಿಂದಲೇ ಸಂಬಂಧವನ್ನು ನೆನಪು ಮಾಡಿದಾಗ, ಬುದ್ದಿಯಲ್ಲಿ ಬೇರೆ ಮಾತುಗಳೂ ಬರುವುದರಿಂದ ಹೃದಯವು(ಮನಸ್ಸು) ಬದಲಾಗಿಬಿಡುತ್ತದೆ. ನಂತರ ಪರಿಶ್ರಮ ಪಡಬೇಕಾಗುತ್ತದೆ. ನಂತರ ಹೇಳುವುದೇನು- ನಾವಂತು ನೆನಪು ಮಾಡಿದೆವು. ಬಾಬಾ ತಾವು ನನ್ನ ಸಂಗಾತಿ ಆಗಿದ್ದೀರಿ. ಆದರೆ ಸಂಗಾತಿಯು ಸಂಬಂಧವನ್ನು ನಿಭಾಯಿಸಲಿಲ್ಲ, ಅನುಭವವಾಗಲಿಲ್ಲ ಅಂದರೆ ಇದು ಬುದ್ಧಿಯಿಂದ ನೆನಪು ಮಾಡುವುದಾಯಿತು. ಹೃದಯದಿಂದ ಸ್ನೇಹವನ್ನು ಸಮಾವೇಶ ಮಾಡಿಕೊಳ್ಳಲಿಲ್ಲ. ಬುದ್ದಿಯಲ್ಲಿ ಯಾವುದೇ ಮಾತು ಬಂದರೆ ಹೊರಹೋಗುವುದೂ ಬಹಳ ಬೇಗನೆ ಹೋಗುತ್ತದೆ. ಆದರೆ ಹೃದಯದಲ್ಲಿ ಸಮಾವೇಶವಾದರೆ ಇಡೀ ಪ್ರಪಂಚವೇ ತೆಗೆಯಲು ಬಯಸಿದರೂ ತೆಗೆಯಲು ಸಾಧ್ಯವಿಲ್ಲ. ಹಾಗಾದರೆ ಸರ್ವ ಸಂಬಂಧಗಳನ್ನು ಸಮಯದನುಸಾರ. ಯಾವ ಸಮಯದಲ್ಲಿ ಯಾವ ಸಂಬಂಧದ ಅವಶ್ಯಕತೆಯಿದೆಯೋ, ಉದಾ: ಮಿತ್ರನ ಸಂಬಂಧದ ಅವಶ್ಯಕತೆಯಿದೆ. ಆದರೆ ತಂದೆಯನ್ನು ನೆನಪು ಮಾಡಿದರೆ ಮಜಾ ಬರುವುದಿಲ್ಲ. ಆದ್ದರಿಂದ ಯಾವ ಸಮಯದಲ್ಲಿ ಯಾವ ಸಂಬಂಧದ ಅನುಭೂತಿ ಬೇಕಾಗಿರುತ್ತದೆಯೋ ಆ ಸಂಬಂಧವನ್ನು ಸ್ನೇಹದಿಂದ, ಹೃದಯದಿಂದ ಅನುಭವ ಮಾಡಿರಿ. ನಂತರ ಪರಿಶ್ರಮವೆನಿಸುವುದಿಲ್ಲ ಹಾಗೂ ಬೋರ್ ಸಹ ಆಗುವುದಿಲ್ಲ. ಸದಾ ಮನೋರಂಜನೆ ಎನಿಸುತ್ತದೆ. ಅಂದಾಗ ಈ ವರ್ಷದಲ್ಲಿ ಏನು ಮಾಡುವಿರಿ?

ಪರಿಶ್ರಮದಿಂದ ಹೊರಬರಬೇಕು. ಈ ತಿಂಗಳು ಕೇವಲ ಓ.ಕೆ. ಬರೆಯಿರಿ ಮತ್ತೇನೂ ಬರೆಯಬಾರದು. ಓ.ಕೆ.... ಎಂದು ಬರೆಯುವುದರಿಂದ ತಿಳಿಯುತ್ತೇವೆ- ಪರಿಶ್ರಮದಿಂದ ಹೊರಬಂದಿದ್ದಾರೆ. ಬಹಳ ದೊಡ್ಡ ಪತ್ರವನ್ನು ಬರೆಯಬಾರದು. ಇಲ್ಲದಿದ್ದರೆ ಹೇಳುತ್ತೀರಿ- ಪತ್ರವನ್ನಂತು ಬರೆದೆವು ಆದರೆ ಉತ್ತರ ಸಿಗುವುದಿಲ್ಲ. ತಮ್ಮ ಪತ್ರಗಳು ತಲುಪಿಲ್ಲ ಎನ್ನುವಂತಲ್ಲ. ಪತ್ರ ಬರೆಯಲು ಆರಂಭ ಮಾಡುತ್ತೀರಿ ಮತ್ತು ಹೇಗಾದರೆ ಅಂಚೆಯನ್ನು ಕಳುಹಿಸಿದಾಗ ಅಲ್ಲಿ ಕಂಪ್ಯೂಟರ್‌ನಲ್ಲಿ ಮೊದಲೇ ಬಂದುಬಿಡುತ್ತದೆ, ಅಂಚೆಯು ನಂತರ ತಲುಪುತ್ತದೆ. ಅದೇರೀತಿ ಬಾಪ್‌ದಾದಾರವರೂ ಸಹ ಇಷ್ಟೊಂದು ಪತ್ರಗಳ ಉತ್ತರವನ್ನು ಪ್ರತಿನಿತ್ಯ ಮುರಳಿಯಲ್ಲಿ ಎಲ್ಲರಿಗೂ ಕೊಡುತ್ತಾರೆ. ಯಾರಾದರೂ ಇಷ್ಟೊಂದು ಬರೆಯುತ್ತಾರೆಯೇ!

ಅಂದಮೇಲೆ ತಮ್ಮ ಇಷ್ಟೊಂದು ಸ್ವಮಾನಗಳನ್ನು ನೋಡಿರಿ. ತಮ್ಮೆಲ್ಲರೊಂದಿಗೆ ಪ್ರೀತಿಯೆಷ್ಟಿದೆ ಎಂದು ನೋಡಿ! ಪರಮಾತ್ಮನ ಮೇಲೆ ಪ್ರೀತಿಯಿದೆ ಆದ್ದರಿಂದ ಪತ್ರವನ್ನು ಬರೆಯುತ್ತಾರೆ. ಅರ್ಥಾತ್ ಮುರಳಿಯಲ್ಲಿ ಉತ್ತರವನ್ನೂ ಕೊಡುತ್ತಾರೆ. ಮತ್ತು ನೆನಪು-ಪ್ರೀತಿಯನ್ನೂ ಕೊಡುತ್ತಾರೆ. ಒಂದುವೇಳೆ ಯಾವುದೇ ಪ್ರಶ್ನೆಯು ಉತ್ಪನ್ನವಾಯಿತು ಅಥವಾ ಯಾವುದೇ ಸಮಸ್ಯೆಯೇ ತಮ್ಮಮುಂದೆ ಬಂದರೂ ಮುರಳಿಯಿಂದ ಪ್ರತ್ಯುತ್ತರ ಸಿಗುತ್ತದೆ, ಮತ್ತೆಂದಿಗೂ ಉತ್ತರ ಬರಲಿಲ್ಲ ಎಂದು ದೂರು ಕೊಡಬಾರದು. ಉಳಿದಂತೆ ಚೆನ್ನಾಗಿ ಮಾಡುತ್ತೀರಿ, ಹೃದಯದಿಂದ ಯಾವ ಮಾತು ಬರುತ್ತದೆಯೋ ಅದನ್ನು ತಂದೆಯ ಮುಂದಿಡುವುದು ಅರ್ಥಾತ್ ಹೃದಯದಿಂದ ಹೊರತೆಗೆಯುವುದು. ಅದನ್ನು ಭಲೆ ಮಾಡಿರಿ ಆದರೆ ಚಿಕ್ಕದಾಗಿ ಬರೆಯಿರಿ. ಯಾವಾಗ ಪತ್ರ ಬರೆಯುತ್ತೀರೋ ಆಗ ಅದೇ ಸಮಯದಲ್ಲಿ ಹೃದಯವಂತು ಹಗುರವಾಗಿಬಿಡುತ್ತದೆಯಲ್ಲವೆ! ಏಕೆಂದರೆ ಎಲ್ಲವನ್ನೂ ಕೊಟ್ಟುಬಿಟ್ಟಿರಲ್ಲವೇ! ನಂತರ ಇನ್ನೊಂದು ದಿನದ ಮುರಳಿಯನ್ನೂ ಅದರನುಸಾರವಾಗಿಯೇ ನೋಡಿರಿ- ನಾನು ಪತ್ರದಲ್ಲೇನು ಬರೆದೆನು, ಅದರ ಉತ್ತರವೇನಾಗಿದೆ? ಪ್ರತ್ಯುತ್ತರ ಸಿಗುತ್ತದೆಯಲ್ಲವೆ. ಬೇಹದ್ದಿನ ತಂದೆಯಾಗಿದ್ದಾರೆ. ಅಂದಮೇಲೆ ಪತ್ರವೂ ಬೇಹದ್ದಿನದಾಗಿ ಬರೆಯುವರು, ಚಿಕ್ಕದಾಗಿ ಬರೆಯುವರೇ!

ಬಾಪ್‌ದಾದಾರವರು ನೋಡಿದರು- ನಾಲ್ಕೂ ಕಡೆಯಲ್ಲಿರುವ ಡಬಲ್ ವಿದೇಶಿ ಮಕ್ಕಳು ಸೇವೆಯಲ್ಲಿ ಬಹಳ ಪ್ರೀತಿಯಿಂದ ತೊಡಗಿದ್ದಾರೆ. ಒಬ್ಬೊಬ್ಬರನ್ನೂ ನೋಡಿದಾಗ ಪ್ರತಿಯೊಬ್ಬರೂ, ಒಬ್ಬರಿಗಿಂತ ಇನ್ನೊಬ್ಬರು ಪ್ರಿಯವಾಗುತ್ತಾರೆ. ಒಂದುವೇಳೆ ಹೆಸರು ತೆಗೆದುಕೊಂಡರೆ ಎಷ್ಟು ಹೆಸರುಗಳನ್ನು ತೆಗೆದುಕೊಳ್ಳುವುದು! ಆದ್ದರಿಂದ ಎಲ್ಲರೂ ತಮ್ಮ ಹೆಸರಿನಿಂದ ವಿಶೇಷವಾಗಿ ಸೇವೆಯ ರಿಟರ್ನ್‌ನಲ್ಲಿ ಶುಭಾಷಯಗಳನ್ನು ಸ್ವೀಕಾರ ಮಾಡಿರಿ. ಒಂದುವೇಳೆ ಹೆಸರನ್ನು ತೆಗೆದುಕೊಳ್ಳುವುದು ಆರಂಭ ಮಾಡಿದರೆ ಮಾಲೆ ಮಾಡಬೇಕಾಗುತ್ತದೆ ಆದರೆ ಮಾಲೆಯ ಎಲ್ಲಾ ಮಣಿಗಳೂ ಬಾಪ್‌ದಾದಾರವರ ಸನ್ಮುಖದಲ್ಲಿದ್ದಾರೆ. ಸಮಯ-ಪ್ರತಿಸಮಯ ಸೇವೆಯನ್ನು ಬೇಹದ್ದಿನದಲ್ಲಿ ಮಾಡಲಾಗಿದೆ ಮತ್ತು ಸಫಲತೆಯು ಸಂಪನ್ನವಾಗುತ್ತಿದೆ. ವರ್ತಮಾನ ಸಮಯದಲ್ಲಿ ವಿಶೇಷವಾಗಿ ವಿದೇಶದಲ್ಲಿ ಎರಡು ಸೇವೆಗಳ ಫಲಿತಾಂಶವು ಒಳ್ಳೆಯ ಪ್ರತ್ಯಕ್ಷತೆಯಾಗಿದೆ. ಅನೇಕ ಪ್ರಕಾರದ ಸೇವೆಗಳಂತು ನಡೆಯುತ್ತಿರುತ್ತದೆ ಆದರೆ ವಿಶೇಷವಾಗಿ ಒಂದು- ಗ್ಲೋಬಲ್ ಬುಕ್, ಇದೇನು ಪರಿಶ್ರಮಪಟ್ಟು ತಯಾರು ಮಾಡಲಾಯಿತು. ಅದರ ನಿಮಿತ್ತ ನಾಲ್ಕೂಕಡೆಯಲ್ಲಿರುವ ವಿಶೇಷ ಆತ್ಮರು ಸಂಬಂಧ-ಸಂಪರ್ಕದಲ್ಲಿ ಬರುವುದು ಸಹಜವಾಗಿಬಿಟ್ಟಿತು. ಇದರಲ್ಲಿ ಬಹಳಷ್ಟು ಮಕ್ಕಳು ಹೃದಯಪೂರ್ವಕವಾಗಿ, ಬಹಳ ಪ್ರೀತಿಯಿಂದ ಸಮಯವನ್ನು ಕೊಟ್ಟಿದ್ದಾರೆ, ಸಹಯೋಗ ಕೊಟ್ಟಿದ್ದಾರೆ. ಅದರ ಪ್ರತ್ಯಕ್ಷಫಲ ಸೇವೆಗಾಗಿ ನಿಮಿತ್ತರಾಗಿರುವ ಆತ್ಮರಿಗೆ, ಬಾಪ್‌ದಾದಾರವರು ಪದಮದಷ್ಟು ಶುಭಾಷಯಗಳನ್ನು ಕೊಡುತ್ತಿದ್ದಾರೆ. ಮತ್ತು ಜೊತೆ-ಜೊತೆಗೆ ಈಗ ಯಾವ ಡೈಲಾಗ್ ಅಥವಾ ರಿಟ್ರೀಟ್ ಮಾಡಲಾಯಿತು. ಅದರ ಫಲಿತಾಂಶವೂ ಸಹ ಅಡ್ವಾನ್ಸ್ ಆಗಿ ಬಹಳ ಚೆನ್ನಾಗಿತ್ತು. ಮತ್ತು ಎಲ್ಲಾ ದೇಶದವರೂ ಯಾರು ಇದರಲ್ಲಿ ಸಹಯೋಗ ಕೊಟ್ಟಿರುವಿರೋ ಅವರೆಲ್ಲರಿಗೂ ಶುಭಾಷಯಗಳು. ಬಹಳ ಒಳ್ಳೆಯ ಲಕ್ಷ್ಯವನ್ನಿಡಲಾಯಿತು ಆದ್ದರಿಂದ ನಾಲ್ಕೂಕಡೆಯಲ್ಲಿ ಇವೆರಡು ಪ್ರಕಾರದ ಸೇವೆಗಳು ಚೆನ್ನಾಗಿ ನಡೆಯುತ್ತಿದೆ. ಇನ್ನೂ ಮುಂದೆ ನಡೆಯುತ್ತಿರುತ್ತದೆ. ಬಾಪ್‌ದಾದಾರವರಿಗೆ ನೆನಪಿದೆ- ಮೊದಲು ವಿದೇಶದಿಂದ ವಿ.ಐ.ಪಿ..ಯನ್ನು ಬಿಡಿ, ಐ.ಪಿ..ಯನ್ನೂ ಕರೆತರುವುದೂ ಸಹ ಕಷ್ಟವೆನಿಸುತ್ತಿತ್ತು. ಈಗಂತು ಸಹಜವೆನಿಸುತ್ತಿದೆಯಲ್ಲವೆ! ಇದು ಸೇವೆಯ

ಪ್ರತ್ಯಕ್ಷಫಲವಾಗಿದೆ ಹಾಗೂ ಎಷ್ಟೊಂದು ಆತ್ಮರಿಗೆ ಆಶೀರ್ವಾದಗಳು ಸಿಕ್ಕಿತು! ಯಾರ ಕೈಯಲ್ಲಿ ಬುಕ್ ಹೋಗುವುದೋ ಅವರೆಲ್ಲರ ಆಶೀರ್ವಾದಗಳು ಯಾರ ಖಾತೆಯಲ್ಲಿ ಜಮಾ ಆಗುತ್ತದೆ? ಯಾರು ನಿಮಿತ್ತರಾಗಿದ್ದಾರೆ. ಭಲೆ ಕೊಡುವ ಸೇವೆಯಾಗಿರಬಹುದು. ತಯಾರು ಮಾಡುವ ಸೇವೆಯಾಗಿರಬಹುದು, ಐಡಿಯಾ ಕೊಡುವ ಸೇವೆ ಮಾಡಿರಬಹುದು, ಬರೆಯುವ ಸೇವೆ ಆಗಿರಬಹುದು- ಎಲ್ಲರಿಗೂ ಆಶೀರ್ವಾದಗಳು ಸಿಗುತ್ತವೆ ಅಂದಮೇಲೆ ಎಷ್ಟೊಂದು ಆಶೀರ್ವಾದಗಳು ಸಿಗುತ್ತಿದೆ! ಬಹಳ ಸಿಗುತ್ತಿದೆ. ತಾವು ಕೇವಲ ಸ್ವೀಕಾರ ಮಾಡಿರಿ. ತಮ್ಮಲ್ಲಿಯೇ ವ್ಯಸ್ತರಾಗಿರುತ್ತೀರಿ ಆದ್ದರಿಂದ ಆಶೀರ್ವಾದಗಳನ್ನು ಸ್ವೀಕಾರ ಮಾಡುವುದಿಲ್ಲ. ಮತ್ತು ಯಾರೆಲ್ಲಾ ಐ.ಪಿ.. ವಿ.ಐ.ಪಿ.,ಗಳು ಸಂಪರ್ಕದಲ್ಲಿ ಬರುತ್ತಾರೆಯೋ ಅವರು ಒಬ್ಬೊಬ್ಬರು ಎಷ್ಟೊಂದು ಮಂದಿಗೆ ಅನುಭವವನ್ನು ತಿಳಿಸುತ್ತಾರೆ. ಅವರೆಲ್ಲರಿಂದ ಆಶೀರ್ವಾದಗಳು ಬ್ರಾಹ್ಮಣ ಆತ್ಮರಿಗೆ ಬಹಳಷ್ಟು ಪ್ರಾಪ್ತಿಯಾಗುತ್ತದೆ. ಒಂದುವೇಳೆ ಆ ಆಶೀರ್ವಾದಗಳನ್ನು ಸ್ವೀಕಾರ ಮಾಡಿದರೂ ಸಂಪರನ್ನಾಗಿ ಬಿಡುತ್ತೀರಿ. ಪುಸ್ತಕವೂ ಬಹಳ ಚೆನ್ನಾಗಿ ತಯಾರಾಯಿತು ಮತ್ತು ಕಾರ್ಯಕ್ರಮವೂ ಬಹಳ ಚೆನ್ನಾಗಿದೆ. ಆಗಿದೆ ಮತ್ತು ಭಾರತದವರ ಸೇವೆಯೂ ವಿಶೇಷವಾಗಿ ಈಗ ಕಾರ್ ಯಾತ್ರೆ ನಡೆಯುತ್ತಿದೆ. (ಬ್ಯುಸಿನೆಸ್ ವಿಂಗ್‌ನ ಸಹೋದರ-ಸಹೋದರಿಯರು 11 ಕಾರುಗಳ ಒಂದು ರ್‍ಯಾಲಿಯನ್ನು ರಾಜಕೋಟ್‌ನಿಂದ ಬಾಂಬೆವರೆಗೂ ಮಾಡಿದ್ದಾರೆ. ಅದರಲ್ಲಿ ಅನೇಕ ಪ್ರಕಾರದ ಸೇವೆಗಳಾಗುತ್ತಿದೆ) ಅದರ ಫಲಿತಾಂಶವೂ ಬಹಳ ಚೆನ್ನಾಗಿ ಬಂದಿದೆ. ಇನ್ನುಮುಂದೆ ಒಬ್ಬರಾದರೂ ನಿಮಿತ್ತರಾಗಿಬಿಟ್ಟರೆ ಅನೇಕರ ಭಾಗ್ಯವನ್ನು ಬೆಳಗಿಸುತ್ತಿರುತ್ತಾರೆ. ಈ ಸೇವೆಯ ಫಲಿತಾಂಶವೂ ಚೆನ್ನಾಗಿ ಕಂಡುಬರುತ್ತಿದೆ. ಈ ಸೇವೆಗಳಲ್ಲಿ ಯಾರೆಲ್ಲರೂ ನಿಮಿತ್ತರಾಗಿದ್ದಾರೆಯೋ ಒಲವು-ಉತ್ಸಾಹದಿಂದ ಮುಂದುವರೆಯುತ್ತಿದ್ದಾರೆ. ಅವರೆಲ್ಲರಿಗೂ ನಾಲ್ಕೂಕಡೆಯ ಭಾರತವಾಸಿ ಮಕ್ಕಳಿಗೆ, ಸಹಯೋಗಿ ಮಕ್ಕಳಿಗೆ, ನಿಮಿತ್ತ ಮಕ್ಕಳಿಗೆ ಬಾಪ್‌ದಾದಾರವರು ಶುಭಾಷಯಗಳನ್ನು ಕೊಡುತ್ತಿದಾರೆ. ಪರಿಶ್ರಮ ಹೆಸರಿಗಷ್ಟೆ ಮತ್ತು ಸಫಲತೆ ಹೆಚ್ಚಾಗಿದೆ. ಈಗ ಇಂತಹ ಸೇವೆಗಳ ಯೋಜನೆ ಮಾಡಿರಿ. ಈ ಸೇವೆಯಲಿಯೂ ಇದೇ ಕಾಣಿಸುತ್ತದೆ- ಪರಿಶ್ರಮ ಕಡಿಮೆ, ಹೆಚ್ಚು ಫಲಿತಾಂಶವಿದೆ. ಇದೇರೀತಿ ವಿದೇಶದ ಎರಡೂ ಕಾರ್ಯಗಳಲ್ಲಿಯೂ ಇದೆ. ಒಳ್ಳೆಯದು-

**ದೇಶ-ವಿದೇಶದ ಸರ್ವ ಸೇವೆಗಳಲ್ಲಿ ಒಲವು-ಉತ್ಸಾಹದಿಂದ ವೃದ್ಧಿಯಾಗುತ್ತಿರುವ, ಅವಿಶ್ರಾಂತರಾಗಿ ಅನ್ಯರಿಗೂ ದಾನ-ವರದಾನ ಕೊಡುವಂತಹ ಆತ್ಮರಿಗೆ, ನಾಲ್ಕೂಕಡೆಯಲ್ಲಿರುವ ತಂದೆಯ ಸರ್ವ ಸಂಬಂಧದ ಪ್ರೀತಿಯಲ್ಲಿ ಲೀನರಾಗಿರುವ ಲವಲೀನ ಆತ್ಮರಿಗೆ, ಸದಾ ಸಹಜವೆಂಬ ಅನುಭವ ಮಾಡುವ, ಅನ್ಯರಿಗೂ ಸಹಜತೆಯ ಅನುಭವ ಮಾಡಿಸುವಂತಹ ಸಹಜಯೋಗಿ ಆತ್ಮರಿಗೆ, ಸದಾ ತಮ್ಮನ್ನು ಸ್ವಮಾನದ ಮೂಲಕ ಸಹಜವಾಗಿ ದೇಹಭಾನದಿಂದ ಮುಕ್ತಗೊಳಿಸುವ ಜೀವನ್ಮುಕ್ತ ಆತ್ಮರಿಗೆ, ಸದಾ ತಂದೆಯನ್ನು ಸಂಗಾತಿಯ ಅನುಭವ ಮಾಡುವ ಹಾಗೂ ಜೊತೆಗಾರನ ಅನುಭವ ಮಾಡುವಂತಹ ಸಮೀಪ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 18-02-1994.

***ಸ್ವಮಾನದ ಸ್ಮೃತಿಯ ಸ್ವಿಚ್‌ಅನ್ನು ಆನ್ ಮಾಡುವುದರಿಂದ ದೇಹಾಭಿಮಾನದ ಅಂಧಕಾರವು ಸಮಾಪ್ತಿಯಾಗುತ್ತದೆ.***

ಮಕ್ಕಳು ದೇಹದ ಪರಿವೆಯನ್ನು ಬಿಡುವುದಕ್ಕೆ ಕಷ್ಟಪಡುತ್ತಿದ್ದಾರೆ. ದೇಹ ಅಭಿಮಾನದ ಒಂದು ರೂಪವನ್ನು ಬಿಟ್ಟರೆ ಇನ್ನೊಂದು ಬಂದುಬಿಡುತ್ತದೆ, ಇನ್ನೊಂದು ಬಿಟ್ಟರೆ ಮತ್ತೊಂದು ಬಂದು ಬಿಡುತ್ತದೆ. ಬಿಡುವುದು ಕಷ್ಟವೆನಿಸುತ್ತದೆ & ಧಾರಣೆ ಮಾಡುವುದು ಸಹಜವೆನಿಸುತ್ತದೆ. ಅದಕ್ಕಾಗಿ ಬಾಪ್‌ದಾದಾರವರು ಹೇಳುತ್ತಾರೆ ಸದಾ ಸ್ವಮಾನದಲ್ಲಿರಿ. ಎಲ್ಲಿ ಸಮಾನವಿರುವುದೋ ಅಲ್ಲಿ ದೇಹಾಭೀಮಾನವು ಬರಲು ಸಾಧ್ಯವೇ ಇಲ್ಲ. ಹಾಗಾದರೆ ಬಿಡುವುದಕ್ಕೆ ಕಷ್ಟಪಡಬಾರದು, ಸ್ವಮಾನದಲ್ಲಿ ಇರಲು ಗಮನವಿಡಿ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಕಾಲ ಸಿಂಹಾಸನಾಧಿಕಾರಿ, ವಿಶ್ವಕಲ್ಯಾಣದ ಕಿರೀಟಧಾರಿ ಮತ್ತು ತಿಲಕಧಾರಿ.

2. ನಾನು ಸರ್ವಾತ್ಮರಿಗೆ ತಂದೆಯ ಸಂದೇಶವನ್ನು ಕೊಡುವಂತಹ ಬೇಹದ್ ದೃಷ್ಟಿ, ಬೇಹದ್ ವೃತ್ತಿ, ಬೇಹದ್ ಸ್ಥಿತಿ ಇರುವ ಫರಿಶ್ತಾ ಸ್ವರೂಪ.

3. ನಾನು ಅನಾದಿ ಹಾಗೂ ಆದಿ ಸಂಸ್ಕಾರವನ್ನು ಸಹಜವಾಗಿ ಸ್ಮೃತಿ ಸ್ವರೂಪವನ್ನಾಗಿ ಮಾಡಿಕೊಂಡಿರುವ ಮತ್ತು ನಿಮಿತ್ತ ಭಾವ, ನಿರ್ಮಾಣ ಸ್ವಭಾವ ಹಾಗೂ ಸರ್ವರ ಪ್ರತಿ ಕಲ್ಯಾಣದ ಶ್ರೇಷ್ಠ ಭಾವನೆ ಇಡುವ ಪರಿಶ್ತಾ.

4. ನಾನು ಸ್ವಮಾನದ ಸ್ಮೃತಿಯಲ್ಲಿದ್ದು ಡೈರೆಕ್ಟ್ ಪರಮಾತ್ಮನ ಪ್ರಕಾಶತೆಯ ಸಂಬಂಧದಿಂದ ದೇಹಾಭಿಮಾನದ ಭಿನ್ನ-ಭಿನ್ನ ರೂಪಗಳನ್ನು ಸಮಾಪ್ತಿ ಮಾಡಿರುವ ಲೈಟ್ ಹೌಸ್ ಆಗಿದ್ದೇನೆ.

5. ನಾನು ಪರಮಾತ್ಮನ ಸ್ನೇಹ ಹಾಗೂ ಸಹಯೋಗದ ಮಡಿಲಿನಲ್ಲಿ ಕುಳಿತುಕೊಂಡು ಲಕ್ಷ್ಯದ(ಗುರಿ)ವರೆಗೆ ಸಹಜವಾಗಿ ತಲುಪಿದ್ದೇನೆ.

6. ನಾನು ತಂದೆಯ ಪ್ರೀತಿಯಲ್ಲಿ ಲೀನವಾಗಿ ಇರುವ ಲವಲೀನ ಆತ್ಮ.

7. ನಾನು ಸದಾ ತಂದೆಯೊಂದಿಗೆ ಕಂಬೈನ್ಡ್ ಸ್ವರೂಪದಲ್ಲಿ ಇದ್ದೇನೆ.

8. ನಾನು ಸಮಯಾನುಸಾರ ತಂದೆಯೊಂದಿಗೆ ಸರ್ವ ಸಂಬಂಧಗಳನ್ನು ಸ್ನೇಹದಿಂದ, ಪ್ರೀತಿಯಿಂದ, ಮನಸ್ಸಿನಿಂದ(ಬುದ್ಧಿಯಿಂದ ಅಲ್ಲ) ಅನುಭವ ಮಾಡುವ ಮನ್ಮನಾಭವ ಸ್ವರೂಪ.

9. ನನ್ನ ಯಾವ ಪ್ರಶ್ನೆಗಾದರೂ, ಯಾವ ಸಮಸ್ಯೆಗಾದರೂ ಮುರಳಿಯಿಂದ ಪ್ರತ್ಯುತ್ತರ ಸಿಕ್ಕಿದೆ.